ಅ) 16 ಕೆರೆಗಳು ಎಲ್ಲಾ 16 ಕೆರೆಗಳಲ್ಲೆ ನೀರಾವರಿ ಸೌಲಭ್ಯವಿದೆ.

ಆ) ಬಲ್ಲಾಳ ಸಮುದ್ರ ಕೆರೆಯ ದುರಸ್ತಿಗೆ1994-95ರಲ್ಲಿ11208-80ರೂ.ಗಳು ಖರ್ಚಾಗಿದೆ. ಕಳಪೆ ಕಾಮಗಾರಿಯಾದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಭಟ್ಕಳ ಕ್ಷೇತ್ರದಲ್ಲಿ ಹೊಸ ಪೋಲಿಸ್ ಠಾಣೆ

233 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಭಟ್ಕಳ ವಿಧಾನಸಭಾ ಕ್ಷೇತ್ರದ ಮುರ್ಡೇಶ್ವರ ಮತ್ತು ಮಂಕಿಯಲ್ಲಿ ಹೊಸ ಪೋಲೀಸ್ ಠಾಣೆ ಮಂಜೂರಾಗಿದ್ದರೂ ಪೂರ್ಣ ಪ್ರಮಾಣದ ಠಾಣೆಯಾಗದಿರಲು ಕಾರಮಗಳೇನು;

ಆ) ಭಟ್ಕಳ ನಗರಕ್ಕೆ ಒಂದು ಹೊಸ ಟ್ರಾಫಿಕ್ ಪೋಲೀಸ್ ಠಾಣೆ ಮಂಜೂರು ಮಾಡುವ ಭರವಸೆ ನೀಡಿರುವುದು ನಿಜವಲ್ಲವೇ, ಹಾಗಿದ್ದಲ್ಲಿ ಅದು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 165 ಪಿ.ಸಿ. ಹುದ್ದೆಗಳು ಖಾಲಿ ಇದ್ದ ಕಾರಣ ಸಿಬ್ಬಂದಿ ಕೊರತೆಯಿಂದ ಹೊಸ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗಲಿಲ್ಲ.

ಆ) ಭರವಸೆ ನೀಡಿರುವುದಿಲ್ಲ.

ರಾಮಮೂರ್ತಿನಗರ ಪೋಲಿಸ್ ಠಾಣೆ ಕಟ್ಟಡ ನಿರ್ಮಿಸುವುದು.

520 - ಶ್ರೀ ಡಿ. ಧರ್ಮಸಿಂಗ್ (ಜೇವರ್ಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ರಾಮಮೂರ್ತಿನಗರ ಪೋಲೀಸ್ ಠಾಣೆ ಇವರು ಸರ್ಕಾರದ ಕಟ್ಟಡವೆ ಅಥವಾ ಬಾಡಿಗೆ ಕಟ್ಟಡವೇ ?

ಆ) ರಾಮಮೂರ್ತಿನಗರ ಪೋಲಿಸ್ ಠಾಣೆಗೆ ಸರ್ಕಾರದವರು ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ, ಪೋಲಿಸ್ ಠಾಣೆ, ಹಾಗೂ ಸಿಬ್ಬಂದಿಗೆ ವಸತಿ ಗೃಹಗಳನ್ನು ಕಟ್ಟಲು ಸಾಕಾಗುವಷ್ಟು ನಿವೇಶನವನ್ನು ಪಡೆಯಲಾಗಿದೆಯೇ, ಹಾಗಿದ್ದರೆ ಎಲ್ಲಿ ಮತ್ತು ಎಷ್ಟು ಜಾಗವನ್ನು ಪಡೆಯಲಾಗಿದೆ (ವಿವರ ಒದಗಿಸುವುದು).

ಈ) ರಾಮಮೂರ್ತಿನಗರ ಪೋಲಿಸ್ ಠಾಣೆಯನ್ನು ನಿರ್ಮಿಸಲು ಸಾಕಾಗುವಷ್ಟು ಸ್ಥಳವನ್ನು ಈಸ್ಟ್ ಆಫ್ ಎನ್‌ಜಿಇಎಫ್ ಬಿಡಿಎ ಬಡಾವಣೆಯಲ್ಲಿ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಿ.ಎ. ಸೈಟ್ ನಂ. 1ನ್ನು ಕಾದಿರಿಸಲಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ 1996-97ರ ಆರ್ಥಿಕ ವರ್ಷದಲ್ಲಿ ಪೋಲೀಸ್ ಠಾಣೆ ಹಾಗೂ ವಸತಿ ಗೃಹ ನಿರ್ಮಿಸಲು ಸರ್ಕಾರದವರು ಮಂಜೂರಾತಿ ನೀಡಿ ಹಣ ಒದಗಿಸಿ ಕಟ್ಟಡ ನಿರ್ಮಿಸಲಾಗುವುದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಈ ಪೋಲಿಸ್ ಠಾಣೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ನಿವೇಶನ ಲಭ್ಯವಾದರೆ ಪೋಲೀಸ್ ಠಾಣೆ ಕಟ್ಟಲು ಸರಕಾರದಿಂದ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರದ ಕಛೇರಿಗಳ ಕಂಪ್ಯೂಟರೀಕರಣ ಮಾಡಿದ ಸರ್ಕಾರಿ ಕಛೇರಿಗಳು

255 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೂರ್ಣ ಕಂಪ್ಯೂಟರೀಕರಣ ಮಾಡಿರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು? (ಪಟ್ಟಿ ನೀಡುವುದು).

ಆ) ಸರ್ಕಾರದ ಎಲ್ಲಾ ಇಲಾಖೆಯ ಎಲ್ಲಾ ಕಛೇರಿಗಳನ್ನು ಸಮಗ್ರವಾಗಿ ಕಂಪ್ಯೂಟರೀಕರಣ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆಯೆ? ಎಷ್ಟು ದಿನಗಳಲ್ಲಿ ಪೂರ್ಣ ಕಂಪ್ಯೂಟರೀಕರಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಯಾವುದೇ ಕಛೇರಿಯ ಕೆಲಸ ಕಾರ್ಯಗಳನ್ನು ಪೂರ್ಣ ಕಂಪ್ಯೂಟರೀಕರಣ ಮಾಡಿರುವುದಿಲ್ಲ. ಆದರೂ ಬಹುತೇಕ ಎಲ್ಲಾ ಇಲಾಖೆಗಳಲ್ಲಿ ಕಂಪ್ಯೂಟರೀಕರಣ ಆರಂಭವಾಗಿದೆ. ಇಂತಹ ಇಲಾಖೆಗಳ ಪಟ್ಟಿ ಲಗತ್ತಿಸಿದೆ.

ಆ) ಕಂಪ್ಯೂಟರೀಕರಣ ಮಾಡಬಹುದಾದ ಕೆಲಸ ಕಾರ್ಯಗಳನ್ನು ಗುರುತಿಸಿ, ಅವುಗಳನ್ನು ಹಂತ ಹಂತವಾಗಿ ಕಂಪ್ಯೂಟರೀಕರಣ ಮಾಡಲು ಕ್ರಮಕೈಗೊಳ್ಳಲಾಗಿದೆ. ಈ ದಿಸೆಯಲ್ಲಿ ಕಂಪ್ಯೂಟರೀಕರಣ ಮಾಡಲು ಅಗತ್ಯವಾದ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಪ್ಯಾಕೇಜ್‌ಗಳು ಹಾಗೂ ಇನ್ನಿತರ ಸಾಧನ ಸಲಕರಣೆಗಳನ್ನು ಖರೀದಿಸುವುದರ ಜೊತೆಗೆ ತಾಂತ್ರಿಕ ಸಿಬ್ಬಂದಿಯ ತರಬೇತಿ ಕೆಲಸವನ್ನೂ ಸಹ ಹಮ್ಮಿಕ್ಕೊಳ್ಳಲಾಗಿದೆ.